# ಸೇನೆ ಸೇರುವ ಕನಸಿತ್ತು

**ದೀಪಿಕಾ**
**ಉದಯದ 'ಗೌರಿಪುರದ ಗಯ್ಯಾಳಿಗಳು' ನಾಯಕಿ**

◆ **ಹಾಸ್ಯ ಧಾರಾವಾಹಿಯ ಕೆಲಸ ನಿಮಗೆ ಹಿಡಿಸಿದೆಯಾ?**

2008ರಿಂದ ಅಭಿನಯವನ್ನು ಮಾಡುತ್ತಿದ್ದೇನೆ. ಇದೇ ಮೊದಲ ಬಾರಿಗೆ ಹಾಸ್ಯ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ. ಮೊದಲೆಲ್ಲ ಕಾಮಿಡಿ ಸುಲಭ ಎಂದೇ ಭಾವಿಸಿದ್ದೆ. ನಾನೇ ಪಾತ್ರವಾದಾಗ ಅದರ ಆಳ ಅಗಲ ಗೊತ್ತಾಗುತ್ತಿದೆ. ನಿಜಕ್ಕೂ ನಗಿಸುವುದು ಕಷ್ಟದ ಕೆಲಸ. ನಟನೆ ಮಾಡುವ ಸಂದರ್ಭದಲ್ಲಿ ಹಾಸ್ಯದ ಹುರುಳಿಗೆ ಸ್ವತಃ ನಾನೇ ನಕ್ಕಿದ್ದು ಸಾಕಷ್ಟು ಇದೆ.

◆ **ಗೆಟಪ್ ಹಾಕಿದಾಗ ಮನಸ್ಥಿತಿ ಹೇಗಿರುತ್ತದೆ?**

ಈಚೆಗೆ ಪೊಲೀಸ್ ಗೆಟಪ್ ಹಾಕಿದ್ದೆ. ಅದು ನನಗೆ ಅಷ್ಟೇ ಸೂಟ್ ಆಗಿತ್ತು. ಯೂನಿಫಾರಂ ಧರಿಸಿದಾಗ ಥೇಟ್ ಪೊಲೀಸ್ ಆಗಿದ್ದೆ. ಓದುವಾಗ ಎನ್‌ಸಿಸಿ ಕೆಡೆಟ್ ಕೂಡ ಹೌದು. ಸೆಟ್‌ನಲ್ಲಿ ನನಗೆ ಪೊಲೀಸ್ ಆಫೀಸರ್ ಆಗಬೇಕಿತ್ತು ಎಂದು ಆಶಿಸಿದ್ದರು. ಯಾವ ಪಾತ್ರಗಳನ್ನು ಮಾಡಬೇಕು ಎನ್ನುವ ಆಸೆಗಳು ಇದ್ದವೋ ಆ ಎಲ್ಲ ರೀತಿಯ ಗೆಟಪ್‌ಗಳನ್ನು ಈ ಒಂದೇ ಪಾತ್ರದಲ್ಲಿ ಹಾಕಿದ್ದೇನೆ. ಡಾಕ್ಟರ್, ಲಾಯರ್, ಜಡ್ಜ್, ಟೀಚರ್ ಹೀಗೆ ಅನೇಕ ರೋಲ್ ಮಾಡೆಲ್ ಅನ್ನಿಸಿದ್ದ ವೃತ್ತಿ ಧರ್ಮದ ಪಾತ್ರಗಳನ್ನು ಮಾಡಿದ್ದೇನೆ. ಕಲಾವಿದೆ ಆಗದಿದ್ದರೆ ಭಾರತೀಯ ಸೇನೆ ಸೇರಬೇಕು ಎಂಬ ಆಸೆಯಿತ್ತು. ನಾನು 2008ರಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ದೆಹಲಿ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗವಹಿಸಿದ್ದೆ.

◆ **ನಿಮ್ಮ ಪರಿಚಯ ಹೇಳಿ.**

ಹುಟ್ಟಿದ್ದು ಚೆನ್ನೈ. ಅಮ್ಮ ಜಯಶ್ರೀ ಕುಂದಾಪುರ ಮೂಲ. ಅಪ್ಪ ಚಂದ್ರಶೇಖರ್ ಮೈಸೂರು ಮೂಲ. ಬಿಎಸ್‌ಸಿ ಓದಿದ್ದೇನೆ. ನಟಿ ಎಂ.ಎನ್. ಲಕ್ಷ್ಮೀದೇವಿ ನನ್ನ ಅಜ್ಜಿ. ಚಿತ್ರೀಕರಣವನ್ನು ನಾನು ಆರು ವರ್ಷದವಳಿದ್ದಾಗಿನಿಂದ ನೋಡುತ್ತಾ ಬೆಳೆದಿದ್ದೇನೆ. ಯಾವತ್ತೂ ನಾನು ಈ ಕ್ಷೇತ್ರಕ್ಕೆ ಬರುತ್ತೇನೆ ಎಂದು ಅಂದುಕೊಂಡೇ ಇರಲಿಲ್ಲ. ವೃತ್ತಿಯಾಗಿ ಬೇರೆ ಆಸೆಗಳು ಇದ್ದವು. ನಟನೆ ಬಗ್ಗೆ ಒಂದು ಪ್ಯಾಶನ್ ಇತ್ತು. ಎಂಥ ಯೋಗವೋ ವೃತ್ತಿಯೇ ಪ್ಯಾಶನ್ ಆಯಿತು. ಅನೇಕರಿಗೆ ಇಂತಹ ಅದೃಷ್ಟ ಇರುವುದಿಲ್ಲ. ಇದೇ ನನಗೆ ಬದುಕು ಕಟ್ಟಿಕೊಟ್ಟಿದೆ. ನನಗೆ ಸ್ಫೂರ್ತಿಯ ಚಿಲುಮೆ ಎಂದರೆ ನನ್ನ ಮಗ. ಅವನು 3ನೇ ತರಗತಿಯಲ್ಲಿ ಓದುತ್ತಿದ್ದಾನೆ. ಚಿತ್ರೀಕರಣದ ಜೊತೆ ಕ್ಯಾಮೆರಾ ಹಿಂದೆ ಕೆಲಸ ಮಾಡುವ ಆಸೆ ಇದೆ. ಅದನ್ನು ಚಿಕ್ಕದಾಗಿ ಅಭ್ಯಾಸ ಮಾಡುತ್ತಿದ್ದೇನೆ. ಕಥೆಯನ್ನೂ ಬರೆಯುತ್ತಿದ್ದೇನೆ.

◆ **ಇಷ್ಟು ದೀರ್ಘ ಹಾದಿಯನ್ನು ಇಲ್ಲಿ ಸವೆಸುವ ಭರವಸೆ ನಿಮಗೆ ಇತ್ತಾ?**

ಆಸೆ ಇತ್ತು ಆದರೆ ಭರವಸೆ ಇರಲಿಲ್ಲ. ಇಲ್ಲಿ ಸಾಧಿಸಿ ತೋರಿಸಬೇಕಿತ್ತು. ನನ್ನ ಹಿಂದೆ ಅಜ್ಜಿ ಹೆಸರು ಬೇರೆ ಇತ್ತು. ಅವರ ಮೂಲಕ ಯಾವ ಪಾತ್ರವನ್ನೂ ತೆಗೆದುಕೊಳ್ಳುವ ಉದ್ದೇಶ ಇರಲಿಲ್ಲ. ನನ್ನ ಪಾತ್ರದ ಮೂಲಕ ಇಂತಹವರ ಮೊಮ್ಮಗಳು ಎಂದೆನಿಸಿಕೊಳ್ಳುವ ಆಸೆ ಇತ್ತು. ಅದರಲ್ಲಿ ನಾನು ಯಶಸ್ವಿಯಾಗಿದ್ದೇನೆ. 'ಲಕ್ಷ್ಮೀದೇವಿ ನಿಮ್ಮ ಅಜ್ಜಿನಾ ವೆರಿಗುಡ್ ಚೆನ್ನಾಗಿ ನಟಿಸುತ್ತೀರಿ' ಎಂದು ಹೇಳುತ್ತಾರೆ. ಈ ವೃತ್ತಿ ಅಪೂರ್ವ ಖುಷಿಯನ್ನು ನೀಡಿದೆ. ಒಂದು ದಿನ ಚಿತ್ರೀಕರಣ ಇಲ್ಲದಿದ್ದರೂ ತಲೆ ಕೆಟ್ಟು ಹೋಗುತ್ತದೆ. ಚಿತ್ರೀಕರಣಕ್ಕೆ ಹೋದಾಗ ಮೂಡ್ ಹೇಗೇ ಇರಲಿ, ಎಂತಹ ಸಮಸ್ಯೆಯೇ ಇದ್ದರೂ ಎಲ್ಲ ಮರೆತು ಬಿಡುತ್ತೇನೆ. ಚಿತ್ರೀಕರಣದಲ್ಲಿ ಸಂಪೂರ್ಣ ಪಾತ್ರವಾಗಿ ಇರುತ್ತೇನೆ. ನನ್ನ ಇಷ್ಟದಂತೆ ಕೆಲಸ ಮಾಡುತ್ತಿರುವುದರಿಂದ ಇಷ್ಟು ಬೇಗ ಚಿತ್ರೀಕರಣ ಮುಗೀತಾ ಎಂದು ಅನ್ನಿಸಿದ್ದೂ ಇದೆ. ಪ್ರತಿ ದಿನ ಕಲಿಕೆ ಇದ್ದೇ ಇದೆ. ಹಾಸ್ಯದ ಕಥಾ ವಸ್ತು ಹೊಸದು ಆಗ ನಿರ್ದೇಶಕ ರವಿತೇಜ ತುಂಬ ಸಪೋರ್ಟ್ ಮಾಡಿದ್ದಾರೆ.

ಲೋಕೇಶ್ ಬಸವಟ್ಟಿ ಅನುಭವಿ. ಒಳ್ಳೆಯ ಹಾಸ್ಯ ನಟ. ಅವರ ಜೋಡಿ ಪಾತ್ರ ನಿರ್ವಹಿಸುವುದು ಸವಾಲಾಗಿತ್ತು. ನನ್ನ ಅಜ್ಜಿ ಅದನ್ನೇ ಮಾಡಿದ್ದರೂ ನಾನು ಎಂದೂ ಮಾಡಿರಲಿಲ್ಲ. ಹೊಸದಾಗಿ ಪ್ರವೇಶ ಮಾಡಿದರೂ ಯಶಸ್ವಿಯಾಗಿ ನಿರ್ವಹಿಸುತ್ತಿದ್ದೇನೆ ಎನ್ನುವ ವಿಶ್ವಾಸ ನನಗೆ ಬಂದಿದೆ.

■ ರಾಘವೇಂದ್ರ ಕೆ.

